**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 739/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ** 10

**ದಿನಾಂಕಃ** 06.11.2025 **ಸಿಡಬ್ಲ್ಯೂ** 14

| | |
|---|---|
| ಹೆಸರು | ಚಿನ್ಮಯಿ |
| ತಂದೆ ಹೆಸರು | ಬಾಬು ರಾವ್ |
| ವಯಸ್ಸು | 37 ವರ್ಷ |
| ಉದ್ಯೋಗ | ಕಾರ್ಖಾನೆಗಳ ಸಹಾಯಕ ನಿರ್ದೇಶಕರು |
| ವಾಸ ಸ್ಥಳ | ಹುಬ್ಬಳ್ಳಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಸನ್ 2022 ರಿಂದ ಫೆಬ್ರುವರಿ 2024 ರವರೆಗೆ ದಾವಣಗೆರೆಯಲ್ಲಿ ಆಹಾರ ಕಾರ್ಖಾನೆಗಳ ಸಹಾಯಕ ನಿರ್ದೇಶಕರು ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 18.03.2023 ರಂದು ಹರಿಹರ ಗ್ರಾಮಾಂತರ ಪೊಲೀಸರು ಆಕಾಶ ರೈಸ್ ಇಂಡಸ್ಟ್ರೀಸ್ ಮಲೆಬೆನ್ನೂರು, ಹರಿಹರ ದಿಃ 07.02.2023 ರಂದು ಆಕಾಶ ರೈಸ್ ಇಂಡಸ್ಟ್ರೀಸ್ ನಲ್ಲಿ ನಡೆದ ಘಟನೆಯ ಬಗ್ಗೆ ಸ್ಥಳ ಪರಿಶೀಲಿಸಿ ವರದಿಯನ್ನು ನೀಡಲು ಮನವಿ ನೀಡಿದ್ದರು.

ದಿಃ 09.02.2023 ರಂದು ಸ್ಥಳ ಪರಿವೀಕ್ಷಣೆ ಮಾಡಿ ಸ್ಥಳ ಪರಿಶೀಲನಾ ವರದಿ ಮತ್ತು ಸ್ಥಳ ಕಚ್ಚಾ ನಕಾಶೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ಸಾಕ್ಷಿಯು ಗುರುತಿಸಿದ ಪತ್ರ, ಕಚ್ಚಾ ನಕಾಶೆ ಮತ್ತು ವರದಿಯನ್ನು ಕ್ರಮವಾಗಿ ನಿಪಿ.11, ನಿಪಿ.12 ಮತ್ತು ನಿಪಿ.13 ಎಂದು ಸಾಕ್ಷಿಯ ಸಹಿಗಳನ್ನು ನಿಪಿ.11 (ಎ), ನಿಪಿ.12 (ಎ) ಮತ್ತು ನಿಪಿ.113 (ಎ)ಎಂದು ಗುರುತಿಸಲಾಯಿತು (ಈ ಹಂತದಲ್ಲಿ ಆರೋಪಿ ಪರ ವಕೀಲರು ನಿಪಿ.13 ಕ್ಕೆ ಸದರಿ ದಾಖಲೆಯನ್ನು ಸಾಕ್ಷಿಯು ಈಗಾಗಲೇ ಬೇರೊಂದು ಪ್ರಕರಣದಲ್ಲಿ ಹಾಜರುಪಡಿಸಿದ್ದು ಈ ಪ್ರಕರಣದಲ್ಲಿ ಅದರ ಪ್ರತಿಯನ್ನು ತಾವೇ ಅಟೆಸ್ಟ್ ಮಾಡಿ ಸಲ್ಲಿಸಿರುವುದರಿಂದ ಗುರುತಿಸಲು ಬರುವುದಿಲ್ಲ ಎಂದು ಆಕ್ಷೇಪಣೆ ಮಾಡಿರುತ್ತಾರೆ). ಸಾಕ್ಷಿಯು True copy ಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಂ ಕೆ ವಕೀಲರಿಂದಃ**

ಪೊಲೀಸರು ನೀಡಿದ ಮನವಿ ನಮ್ಮ ಕಚೇರಿಯಲ್ಲಿ ಇದೆ. ಇದೇ ಘಟನೆಗೆ ಸಂಬಂದಿಸಿದಂತೆ ಇನ್ನೊಂದು ಪ್ರಕರಣ ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ಫ್ಯಾಕ್ಟರಿಯಲ್ಲಿ ನಡೆದ ಘಟನೆಗೆ

ಸಂಬಂದಿಸಿದಂತೆ ಪ್ರಕರಣ ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣ ಇದೇ ನ್ಯಾಯಾಲಯದಲ್ಲಿ ಸಿಸಿ 424/2023 ಎಂದು ಚಾಲ್ತಿಯದೆ ಎಂದರೆ ಸರಿ. ಸದರಿ ಪ್ರಕರಣ ದಿಃ 27.04.2023 ರಂದು ಸಲ್ಲಿಸಿರುತ್ತೇವೆ. ಪೊಲೀಸರು ಪ್ರಸ್ತುತ ಪ್ರಕರಣದಲ್ಲಿ ದಾಖಲೆಯನ್ನು ಪಡೆಯಲು ಮನವಿ ಸಲ್ಲಿಸುವ ಸಂದರ್ಭದಲ್ಲಿ ಸದರಿ ಪ್ರಕರಣವನ್ನು ದಾಖಲಿಸಿರಲಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಪೊಲಿಸರಿಗೆ ನೀಡಿದ ದಾಖಲೆಗಳನ್ನು ನಾನು ದಾಖಲಿಸಿದ ಪ್ರಕರಣದಲ್ಲಿ ಸಲ್ಲಿಸಿದ್ದೇನೆ. ಸದರಿ ಪ್ರಕರಣದಲ್ಲಿ ಸಹ ನಾನು ಫ್ರಾಸಾ.1 ರವರಾಗಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ಪಾಟಿ ಸವಾಲು ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಗೆ ಸದರಿ ಪ್ರಕರಣದಲ್ಲಿ ನುಡಿದ ಸಾಕ್ಷ್ಯವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿದ್ದು ಸದರಿ ದಾಖಲೆಯನ್ನು **ಮುಖಾಬಿಲೆಯಾಗಿ ನಿಪಿ.14 ಎಂದು** ಗುರುತಿಸಲಾಯಿತು. ನಾನು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನಾ ವರದಿ ತಯಾರಿಸಿ, ಸದರಿ ವರದಿಯನ್ನು ಪೊಲೀಸರಿಗೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮನವಿ ಮೇರೆಗೆ ನಿಪಿ.11 ರಿಂದ 13 ನ್ನು ನೀಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ